ಅನುಕೂಲವಾದ ಸೀಟನ್ನು ಹುಡುಕುತ್ತಿದ್ದಾರೆಯೇನೋ. ನನ್ನ ಈ ಹಿಂದಿನ ಅನುಭವದ ಪ್ರಕಾರ ಮಧ್ಯ ಭಾಗದ ಸೀಟಿನ ಕಡೆ ನಡೆದ ನನ್ನನ್ನು ನಿಲ್ಲಿಸಿ, 'ಈ ಕಡೆ ಹೋಗೋಣ' ಎಂದು ಸನ್ನೆಯಲ್ಲಿ ಹೇಳಿದರು. ಮಧ್ಯದಲ್ಲಿ ಕುಳಿತರೆ ಸಿನಿಮಾ ಚೆನ್ನಾಗಿ ಕಾಣುವುದೆಂದು ನನ್ನ ಅನಿಸಿಕೆ. ಆದರೆ ಶೆಂಬಾಯಿಅಪ್ಪತ್ತಾ ಸೀಟಿನ ಸಾಲಿನಲ್ಲಿ ಒಂದು ಮೂಲೆಯ ಜಾಗವನ್ನು ಆಯ್ಕೆ ಮಾಡಿದರು. ಮೇಲೆ ನೋಡಿದರು. ಫ್ಯಾನ್ ಬಿರುಸಾಗಿ ಸುತ್ತುತ್ತಿದ್ದ ಜಾಗ. ಗಾಳಿ ತಣ್ಣಗೆ ಬೀಸುತ್ತಿತ್ತು. ಒಳ್ಳೆಯ ಕತ್ತಲು. ಸಿನಿಮಾ ಚೆನ್ನಾಗಿ ಕಾಣಬಹುದು ಎಂಬುದರಿಂದ ಇರಬಹುದು. ಇವುಗಳನ್ನೆಲ್ಲ ಒಂದು ಪಾಠದಂತೆ ಶೆಂಬಾಯಿಅಪ್ಪಾತ್ತಾ ಬಳಿ ಕಲಿಯಬೇಕಾದದ್ದು ಎಂದು ತಿಳಿಯಿತು. 'ದೊಡ್ಡವರೊಂದಿಗೆ ಇರುವಾಗ ತಿಂಡಿ ತಿನಸುಗಳನ್ನು ಕರಕ್‌ಮುರಕ್ ಅಂತ ಶಬ್ದ ಬರುವಂತೆ ತಿನ್ನಬಾರದು. ಕಿವಿ, ಮೂಗುಗಳೊಳಗೆ ಬೆರಳು ತೂರಿಸುವುದೋ, ಅಲ್ಲಿಲ್ಲಿ ನೋಡುತ್ತಾ ಮಾತನಾಡುವುದೋ ಕೂಡದು' ಎಂದೆಲ್ಲ ನನ್ನ ಬೆನ್ನ ಸವರುತ್ತಾ ನನಗೆ ಅರ್ಥಮಾಡಿಸುವಲ್ಲಿ ಶೆಂಬಾಯಿಅಪ್ಪತ್ತಾ ಬಹಳ ನಿಪುಣೆ. ಅವರೂ ಹಾಗೆಯೇ ಇರುವರಲ್ಲಾ? ಆದರೆ, ಅಮ್ಮ ಇದನ್ನೆಲ್ಲ ಒಂದು ಕಟ್ಟಳೆಯಂತೆ ಹೇಳುವಳು, ಕರಾರಾಗಿ ಮಾಡು ಎನ್ನುವಳು. ಒಂದು ಒರಟುತನವಿರುವುದು. ದಿಟ್ಟಿಸಿ, ಹೆದರಿಸಿ ಹಲವು ಸಂಗತಿಗಳನ್ನು ಕಲಿಸುವಳು. ಆದರೆ ಅಪ್ಪತ್ತಾ ಬಳಿ ಒಂದು ಸೌಮ್ಯತೆ ಕಾಣುವುದು. ಅಕ್ಕರೆ ಇರುವುದು. ಆ ಅಯಸ್ಕಾಂತದ ಕಣ್ಣುಗಳು... ಅವು ಅರ್ಥವಾಗದ್ದೆಲ್ಲವನ್ನೂ ಅರ್ಥಮಾಡಿಸುತ್ತಿದ್ದವು. ಮೆಲ್ಲಗೆ ತುಟಿಗಳನ್ನು ಕೂಡಿಸಿ, ಕಣ್ಣುಗಳನ್ನು ಶಾಂತವಾಗಿ ಹೊರಳಿಸಿ ಹೇಳಿದರೆ ತಕ್ಷಣ ಮೆದುಳಿಗೆ ನಾಟುತ್ತದೆ...

ಶೆಂಬಾಯಿಅಪ್ಪತ್ತಾ ಗಣಿತದ ಟೀಚರಾಗಬೇಕಿತ್ತು. ವಿಚಾರಿಸಿದಾಗ, 'ಓದಲೂ ಕಳುಹಿಸಿದ್ದರಂತೆ. ಆದರೆ, ಶೆಂಬಾಯಿ ಅಪ್ಪತ್ತಾಗೆ ಅವುಗಳ ಬಗ್ಗೆ ಒಲವಿರಲಿಲ್ಲವಂತೆ' ಎಂದು ಅಮ್ಮ ಅದರಲ್ಲಿ ಆಸಕ್ತಿ ಇಲ್ಲವೆಂಬಂತೆ ಮುಖವನ್ನು ತಿರುಗಿಸಿಕೊಂಡು ಹೇಳಿದ್ದು ನೆನಪಿನಲ್ಲಿದೆ. ಅಮ್ಮ ಯಾವಾಗಲೂ ಹಾಗೆಯೇ.

ಶೆಂಬಾಯಿಅಪ್ಪತ್ತಾ ಮೇಲೆ ಅಮ್ಮನಿಗೆ ಒಂದು 'ಇದು' ಇರುವುದು. ಪ್ರೀತಿ, ವಾತ್ಸಲ್ಯ, ಬಾಂಧವ್ಯ ಎಲ್ಲವೂ ಇರುವುದು. ಅಮ್ಮನನ್ನು ಬಿಟ್ಟು ಅಪ್ಪತ್ತಾ ಜೊತೆಗೆ ನಾನು ಯಾವ ರೀತಿಯಲ್ಲೂ ಅಂಟಿಕೊಳ್ಳಬಾರದೆಂದು ಎಚ್ಚರಿಕೆಯಿಂದ ಇರುವುದು ಗೊತ್ತು. ನನಗೂ ಅಪ್ಪತ್ತಾಗೂ ಮಧ್ಯೆ ಒಂದು ಉದ್ದೇಶಪೂರ್ವಕವಾದ ಪರದೆಯನ್ನು ಇಳಿಬಿಟ್ಟಿರುವರು. ಯಾಕೆಂದು ತಿಳಿಯದು. ಕೆಲವೊಮ್ಮೆ ಊರಿಂದ ಬರುವಾಗ ಅಪ್ಪತ್ತಾ ತನ್ನ ಮನೆಗೆ ಕರೆಯುವರು. ಆಗೆಲ್ಲ ನಾನು ಅಮ್ಮನನ್ನು ನೋಡುತ್ತಿದ್ದೆ. ಯಾವಾಗ ಏನು ಮಾಡಿದರೂ ಅಮ್ಮ ನನ್ನನ್ನು ದಿಟ್ಟಿಸಿ ನೋಡುವಂತೆ ಒಂದು ಭಾವನೆ ನನ್ನೊಳಗೆ ಸದಾ ಕಾಡುವುದು. ಬಹುಶಃ ಇದನ್ನು ಅಪ್ಪತ್ತಾರೊಂದಿಗೆ ಇರುವಾಗಲೇ ಅರಿತುಕೊಂಡದ್ದು ಎಂದು ನನಗೆ ಈಗ ತಿಳಿಯುತ್ತಿದೆ.

'ಏನಿದ್ದರೂ ಅವರು ಶ್ರೀಮಂತರು. ಅವರ ಗುಣವನ್ನು ಯಾವಾಗ ಬೇಕಾದರೂ ತೋರಿಸಬಹುದು. ನಾವೇ ಎಚ್ಚರಿಕೆಯಿಂದ ಇರಬೇಕು. ಅವರ ನಡೆ–ನುಡಿಗಳು ಬೇರೆ, ನಮ್ಮ ಆಚಾರ ವಿಚಾರ ಬೇರೆ' ಎಂದೆಲ್ಲಾ ಮಾತನಾಡುವಾಗೆಲ್ಲ ನನಗೆ ಅರ್ಥವಾಗಬೇಕೆಂಬಂತೆ ಉದ್ದೇಶಿಸಿ ಹೀಗೆ ಹೇಳುವುದು ಅಮ್ಮನ ಪದ್ಧತಿ. ಒಮ್ಮೆ ಅಪ್ಪತ್ತಾ ಕರೆದಾಗ 'ಕೆಲಸವಿದೆ' ಎಂದು ಅಮ್ಮನೇ ನಿರಾಕರಿಸಿದಳು. ಬೇರೆ ದಾರಿಯಿಲ್ಲದೆ ನಾನು ಅಪ್ಪತ್ತಾರೊಂದಿಗೆ ಹೋಗಲಿಲ್ಲ. ನನ್ನ ಮುಖ ಬಾಡಿಹೋಗಿದ್ದನ್ನು ನೋಡಿಯೂ ಅಮ್ಮ ಅನುಮತಿಸಲಿಲ್ಲ. ಅಮ್ಮನ ಅನುಮತಿಯಿಲ್ಲದೆ ನಾನು ಏನನ್ನೂ ಮಾಡಿಲ್ಲ. ಅದರಿಂದ ನನಗೆ ಯಾವ ನಷ್ಟವೂ ಇಲ್ಲ ಈವರೆಗೆ. ಅದೇ ಸಮಯ ಶೆಂಬಾಯಿಅಪ್ಪತ್ತಾ ಬೀದಿಯ ತಿರುವಿನಲ್ಲಿ ತಿರುಗಿ ತಲೆಮರೆಯಾದಂತೆ, ಅಮ್ಮ ನನ್ನ